ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ: DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER : ವಿಜಯವಾಣಿ ದಿನಾಂಕ : DATE : 23/07/2019

# ಮತ್ತೆ ಬಡ್ತಿ ಮೀಸಲು ಹೋರಾಟ

## ಎಸ್ಸಿ-ಎಸ್ಟಿ ಮೀಸಲಾತಿ ತೀರ್ಪು ಮರುಪರಿಶೀಲನೆಗೆ ಅರ್ಜಿ

ವಿಜಯವಾಣಿ ಸುದ್ದಿಜಾಲ ಬೆಂಗಳೂರು 23-7-19

ಸರ್ಕಾರಿ ನೌಕರರ ಮುಂಬಡ್ತಿ ಹೋರಾಟ ಮತ್ತೆ ಶುರುವಾಗಿದೆ. ಎಸ್ಸಿ-ಎಸ್ಟಿ ನೌಕರರ ಬಡ್ತಿ ಮೀಸಲಾತಿ ಮುಂದುವರಿಸಿರುವ ಕುರಿತು ನೀಡಿರುವ ತೀರ್ಪು ಮರುಪರಿಶೀಲಿಸುವಂತೆ ಅಹಿಂಸಾ ಸಂಘಟನೆ ಸಲ್ಲಿಸಿರುವ ಅರ್ಜಿಯನ್ನು ಸುಪ್ರೀಂ ಕೋರ್ಟ್ ಈ ವಾರದಲ್ಲಿ ವಿಚಾರಣೆಗೆ ಅಂಗೀಕರಿಸುವ ಸಾಧ್ಯತೆ ಇದೆ. ಏತನ್ಮಧ್ಯೆ ಚೇಂಬರ್‌ನಲ್ಲಿ ವಿಚಾರಣೆ ನಡೆಸುವ ಬದಲಿಗೆ ತೆರೆದ ಕಲಾಪದಲ್ಲೇ ಪರಿಶೀಲಿಸುವಂತೆ ಮತ್ತೊಂದು ಅರ್ಜಿ ಸಲ್ಲಿಸಲಾಗಿದೆ.

2017ರ ಸುಪ್ರೀಂಕೋರ್ಟ್ ತೀರ್ಪು ಹೊರಬೀಳುವ ಮುನ್ನ ರಾಜ್ಯದಲ್ಲಿ ಜಾರಿಯಲ್ಲಿದ್ದ ಎಸ್ಸಿ-ಎಸ್ಟಿ ಮೀಸಲಾತಿ ಕಾಯ್ದೆ ಅನ್ವಯವೇ ಬಡ್ತಿ ವ್ಯವಸ್ಥೆ ಮುಂದುವರಿಸುವಂತೆ ಸುಪ್ರೀಂಕೋರ್ಟ್ ಕೊಟ್ಟಿರುವ ತೀರ್ಪು ಪ್ರಶ್ನಿಸಿ ಮರುಪರಿಶೀಲನಾ ಅರ್ಜಿ ಸಲ್ಲಿಸಲಾಗಿದೆ. ನ್ಯಾಯಮೂರ್ತಿಗಳ ಕೊಠಡಿಯೊಳಗೆ ಅರ್ಜಿ ಪರಿಶೀಲಿಸುವ ಬದಲು ಕೋರ್ಟ್ ಕಲಾಪದಲ್ಲೇ ವಾದ-ಪ್ರತಿವಾದ ಆಲಿಸುವಂತೆ ಅಹಿಂಸಾ ಮನವಿ ಮಾಡಿದೆ.

ಈ ಮೊದಲು ತೀರ್ಪು ನೀಡಿರುವ ದ್ವಿಸದಸ್ಯ ಪೀಠದ ನ್ಯಾಯಮೂರ್ತಿಗಳಾದ ಚಂದ್ರಚೂಡ್ ಮತ್ತು ಉದಯ್ ಲಲಿತ್ ಅವರು ಪ್ರಸ್ತುತ ಬೇರೆಬೇರೆ ಪೀಠಗಳಲ್ಲಿದ್ದಾರೆ. ಹೀಗಾಗಿ ಚೇಂಬರ್‌ನಲ್ಲಿ ಅಥವಾ ತೆರೆದ ಕಲಾಪದಲ್ಲಿ ಎಲ್ಲಿ ವಿಚಾರಣೆ ನಡೆಸಬೇಕು ಎಂಬುದರ ಕುರಿತು ಇಬ್ಬರೂ ನ್ಯಾಯಮೂರ್ತಿಗಳು ಚರ್ಚಿಸಿ ತೀರ್ಮಾನ ಕೈಗೊಳ್ಳಲಿದ್ದಾರೆ.

ಎಸ್ಸಿ-ಎಸ್ಟಿ ವರ್ಗಕ್ಕೆ ನೇಮಕಾತಿ ವೇಳೆ ಮೀಸಲಾತಿ ಸೌಲಭ್ಯ ನೀಡಲಾಗಿದೆ. ಮತ್ತೆ ಬಡ್ತಿಯಲ್ಲೂ ಅವರಿಗೆ ಮೀಸಲಾತಿ ಸೌಲಭ್ಯ ಕೊಡುವುದು ಸೂಕ್ತವಲ್ಲ. ಇದರಿಂದ ಸಾಮಾನ್ಯ ವರ್ಗದ ನೌಕರರಿಗೆ ಅನ್ಯಾಯವಾಗುತ್ತದೆ. ಅಲ್ಲದೆ ಪರಿಶಿಷ್ಟ ಜಾತಿ ಮತ್ತು ಪಂಗಡದ ನೌಕರರಿಗೆ ಶೇ.18 ಮೀಸಲಾತಿ ಕೊಡಲಿ. ಅದನ್ನು ಬಿಟ್ಟು ಸರ್ಕಾರ ಎಲ್ಲ ಹುದ್ದೆಗಳಲ್ಲೂ ಮೀಸಲಾತಿ ಕೊಡುವುದು ಸರಿಯಲ್ಲ. ಈ ವಿಚಾರದಲ್ಲಿ ಸುಪ್ರೀಂಕೋರ್ಟ್ ಕೊಟ್ಟಿರುವ ತೀರ್ಪು ತಪ್ಪಿನಿಂದ ಕೂಡಿದ್ದು, ಮರುಪರಿಶೀಲಿಸುವಂತೆ ಅರ್ಜಿಯಲ್ಲಿ ಕೋರಲಾಗಿದೆ ಎಂದು ಅಹಿಂಸಾ ಅಧ್ಯಕ್ಷ ನಾಗರಾಜ್ 'ವಿಜಯವಾಣಿ'ಗೆ ಮಾಹಿತಿ ನೀಡಿದ್ದಾರೆ.

### ಮುಂಬಡ್ತಿ ಪ್ರಕ್ರಿಯೆ ಮುಕ್ತಾಯ

2017ರಲ್ಲಿ ಸುಪ್ರೀಂಕೋರ್ಟ್ ನೀಡಿದ್ದ ತೀರ್ಪಿನ ಅನ್ವಯ ಎಸ್ಸಿ-ಎಸ್ಟಿ ವರ್ಗದ 3700ಕ್ಕೂ ಅಧಿಕ ಅಧಿಕಾರಿಗಳು ಹಾಗೂ ನೌಕರರಿಗೆ ಹಿಂಬಡ್ತಿ ಕೊಟ್ಟು ಜೇಷ್ಠತೆ ಆಧರಿಸಿ ಸಾಮಾನ್ಯ ವರ್ಗದ ನೌಕರರಿಗೆ ಬಡ್ತಿ ಕೊಡಲಾಗಿತ್ತು. ಸುಪ್ರೀಂಕೋರ್ಟ್‌ನ 2ನೇ ತೀರ್ಪು ಪ್ರಕಟವಾದ ಬಳಿಕ ಹಿಂಬಡ್ತಿಯಾಗಿದ್ದವರಿಗೆ ಪುನಃ ಮುಂಬಡ್ತಿ ಕೊಡುವ ಪ್ರಕ್ರಿಯೆ ಮುಗಿದಿದೆ. ಹಿಂಬಡ್ತಿಯಾದವರನ್ನು ಖಾಲಿ ಇದ್ದ ಹುದ್ದೆಗಳಿಗೆ ಭರ್ತಿ ಮಾಡಿ ಹೆಚ್ಚುವರಿಯಾಗಿದ್ದವರಿಗೆ ಸೂಪರ್ ನ್ಯೂಮರರಿ ಹುದ್ದೆ ಕೊಡಲಾಗಿದೆ.



ತೀರ್ಪಿನ ಮರುಪರಿಶೀಲನಾ ಅರ್ಜಿ ವಿಚಾರಣೆಯನ್ನು ಓಪನ್ ಕೋರ್ಟ್‌ನಲ್ಲಿ ನಡೆಸಲು ಮನವಿ ಮಾಡಲಾಗಿದೆ. ನ್ಯಾಯಮೂರ್ತಿ ಚಂದ್ರಚೂಡ್ ಅವರು ಬೇರೊಂದು ಪೀಠದಲ್ಲಿರುವುದರಿಂದ ಅವರ ಜತೆ ಚರ್ಚಿಸಿ ಮುಂದಿನ ತೀರ್ಮಾನ ತೆಗೆದುಕೊಳ್ಳುವುದಾಗಿ ನ್ಯಾಯಮೂರ್ತಿ ಉದಯ್ ಲಲಿತ್ ಹೇಳಿದ್ದಾರೆ.

। ಎಂ. ನಾಗರಾಜ್ ಅಧ್ಯಕ್ಷ, ಅಹಿಂಸಾ